# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 57 |
| ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 09.12.2024 |
| ಉತ್ತರಿಸುವ ಸಚಿವರು | : | ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು, ಚಾಮರಾಜನಗರ ಮತ್ತಿತರ ಜಿಲ್ಲೆಗಳಲ್ಲಿ ಅರಣ್ಯ ಭೂಮಿಯನ್ನು ಸ್ವಾತಂತ್ರ್ಯ ಪೂರ್ವದಿಂದಲೂ ಗುತ್ತಿಗೆಗೆ ಪಡೆದು ಕಾಫಿ, ಟೀ, ರಬ್ಬರ್ ಬೆಳೆಯುತ್ತಿರುವ ಪ್ರತಿಷ್ಠಿತ ಕಂಪೆನಿಗಳು ಯಾವುವು; (ಕಂಪನಿಗಳ ಹೆಸರಗಳನ್ನು ಜಿಲ್ಲೆ ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು) | **ಅರಣ್ಯ ಭೂಮಿ ಗುತ್ತಿಗೆ ಪಡೆದಿರುವ ಕಂಪನಿಗಳ ವಿವರ ಕೆಳಕಂಡಂತಿದೆ.**<br><br>**ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು**<br>1. ಮರ್ಕೇರಾ ರಬ್ಬರ್ ಕಂಪನಿ<br>2. ನೀಲಾಂಬುರ್ ರಬ್ಬರ್ ಕಂಪನಿ<br>3. ಥಾಮ್ ಸನ್ ರಬ್ಬರ್ ಕಂಪನಿ<br><br>**ವಿರಾಜಪೇಟೆ ತಾಲ್ಲೂಕು**<br>1. ಪೋರ್ಟ್ ಲ್ಯಾಂಡ್ ರಬ್ಬರ್ ಕಂಪನಿ<br><br>**ಪೊನ್ನಂಪೇಟೆ ತಾಲ್ಲೂಕು**<br>1. ಟಾಟಾ ಕಾಫಿ ಲಿ.,<br>2. ಗ್ಲೆನ್ ಲೋರೆನ್ ಪ್ಲಾಂಟೇಷನ್<br><br>**ಚಾಮರಾಜನಗರ ಜಿಲ್ಲೆ, ಚಾಮರಾಜನಗರ ತಾಲ್ಲೂಕು**<br>1. ಎಮರಾಲ್ಡ್ ಹೆವೆನ್ ಎಸ್ಟೇಟ್, ಬೇಡಗುಳಿ<br>2. ಬಿಳಿಗಿರಿ ರಂಗನ ಎಸ್ಟೇಟ್, ಬೇಡಗುಳಿ<br><br>**ಕೊಳ್ಳೇಗಾಲ ತಾಲ್ಲೂಕು**<br>1. ನೀಲಗಿರಿ ಪ್ಲಾಂಟೇಷನ್ ಲಿ., ಹೊನ್ನಮೇಟಿ |
| ಆ) | ಸದರಿ ಬೆಳೆಗಳನ್ನು ಬೆಳೆಯಲು ಗುತ್ತಿಗೆ ಪಡೆದ ಒಟ್ಟು ಭೂಮಿಯ ವಿಸ್ತೀರ್ಣ ಎಷ್ಟು; (ಕಂಪನಿವಾರು ಅಥವಾ ಗುತ್ತಿಗೆದಾರರ ವಾರು ಮಾಹಿತಿ ನೀಡುವುದು) | 1. ಮರ್ಕೇರಾ ರಬ್ಬರ್ ಕಂಪನಿ — 1074 ಎಕರೆ<br>2. ನೀಲಾಂಬುರ್ ರಬ್ಬರ್ ಕಂಪನಿ — 713.03 ಎಕರೆ<br>3. ಥಾಮ್ ಸನ್ ರಬ್ಬರ್ ಕಂಪನಿ — 625.00 ಎಕರೆ<br>4. ಪೋರ್ಟ್ ಲ್ಯಾಂಡ್ ರಬ್ಬರ್ ಕಂಪನಿ — 521.76 ಹೆ. (1289.29 ಎಕರೆ)<br>5. ಟಾಟಾ ಕಾಫಿ ಲಿ., — 373.678 ಹೆ. (923.378 ಎಕರೆ)<br>6. ಗ್ಲೆನ್ ಲೋರೆನ್ ಪ್ಲಾಂಟೇಷನ್ — 113.21 ಹೆ. (279.748 ಎಕರೆ)<br>7. ನೀಲಗಿರಿ ಪ್ಲಾಂಟೇಷನ್ ಲಿ., ಹೊನ್ನಮೇಟಿ — 184 ಎಕರೆ<br>8. ಬಿಳಿಗಿರಿ ರಂಗನ ಎಸ್ಟೇಟ್, ಬೇಡಗುಳಿ — 25 ಎಕರೆ<br>9. ಎಮರಾಲ್ಡ್ ಹೆವೆನ್ ಎಸ್ಟೇಟ್ ಬೇಡಗುಳಿ — 37.25 ಎಕರೆ |

ಇ) ಗುತ್ತಿಗೆ ಪಡೆದ ಕಂಪೆನಿಗಳು ಗುತ್ತಿಗೆ ಹಣ ಮತ್ತು ಬಡ್ಡಿಯನ್ನು ಸರ್ಕಾರಕ್ಕೆ ಪಾವತಿ ಮಾಡಿದಿಯೇ; ಇಲ್ಲವಾದಲ್ಲಿ ಎಷ್ಟು ಮೊತ್ತವನ್ನು ಸರ್ಕಾರಕ್ಕೆ ಪಾವತಿ ಮಾಡಬೇಕಿದೆ; (ತಾಲ್ಲೂಕುವಾರು ಕಂಪೆನಿವಾರು ಮಾಹಿತಿ ನೀಡುವುದು)

ಗುತ್ತಿಗೆ ಪಡೆದಿರುವ ಕಂಪನಿಗಳು ಗುತ್ತಿಗೆ ಬಾಡಿಗೆಯನ್ನು ಹಾಗೂ ಬಡ್ಡಿಯ ಹಣವನ್ನು ಸರ್ಕಾರ ಪಾವತಿಸಲು ಬಾಕಿ ಇರುವ ವಿವರ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

| ತಾಲ್ಲೂಕು<br>ತಾಲ್ಲೂಕು | ಕಂಪನಿ ಹೆಸರು<br>ಕಂಪನಿ ಹೆಸರು | ಗುತ್ತಿಗೆ ಮೊತ್ತ | | |
|---|---|---|---|---|
| | | ಗುತ್ತಿಗೆ ಮೊತ್ತ | ಬಡ್ಡಿ ಮತ್ತು ಚಕ್ರ ಬಡ್ಡಿ | ಬಾಕಿ ಮೊತ್ತ |
| ಮಡಿಕೇರಿ | ಮರ್ಕರ ರಬ್ಬರ್ ಕಂಪೆನಿ | 4.32 | 449.91 | 454.24 |
| ಮಡಿಕೇರಿ | ನೀಲಾಂಬುರ್ ರಬ್ಬರ್ ಕಂಪೆನಿ | 2.87 | 127.35 | 130.22 |
| ಮಡಿಕೇರಿ | ಥಾಮ್ಸನ್ ರಬ್ಬರ್ ಕಂಪೆನಿ | 2.51 | 88.78 | 91.29 |
| ವಿರಾಜಪೇಟೆ | ಪೋರ್ಟ್ ಲ್ಯಾಂಡ್ ರಬ್ಬರ್ ಕಂಪೆನಿ | 5.19 | 219.80 | 224.99 |
| ಪೊನ್ನಂಪೇಟೆ | ಟಾಟಾ ಕಾಫಿ ಲಿ., | 3.80 | 510.41 | 514.21 |
| ಪೊನ್ನಂಪೇಟೆ | ಗ್ಲೆನ್ ಲೋರೆನ್ ಪ್ಲಾಂಟೇಷನ್ | 1.13 | 50.73 | 51.86 |
| ಕೊಳ್ಳೇಗಾಲ | ನೀಲಗಿರಿ ಪ್ಲಾಂಟೇಷನ್ ಲಿ. ಹೊನ್ನಮೇಟಿ | 0.77 | 24.60 | 25.37 |
| | ಒಟ್ಟು | 20.59 | 1471.58 | 1492.18 |

ಈ) ಗುತ್ತಿಗೆ ಹಣ ಮತ್ತು ಬಡ್ಡಿಯನ್ನು ಬಾಕಿ ಉಳಿಸಿಕೊಂಡು ಸರ್ಕಾರಕ್ಕೆ ವಂಚಿಸಿರುವ ಕಂಪೆನಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; ಸರ್ಕಾರವು ಯಾವ ಕಾಲಮಿತಿಯೊಳಗೆ ಗುತ್ತಿಗೆ ಹಣ ಮತ್ತು ಬಡ್ಡಿಯನ್ನು ವಸೂಲಿ ಮಾಡಿಕೊಳ್ಳುವುದು;

ಗುತ್ತಿಗೆ ಹಣ ಮತ್ತು ಬಾಕಿ ವಸೂಲಾತಿಗಳನ್ನು ಪಾವತಿಸಲು ಗುತ್ತಿಗೆದಾರರಿಗೆ ನೋಟೀಸ್ ನೀಡಲಾಗಿದೆ. ಗುತ್ತಿಗೆದಾರರು ನೋಟೀಸ್‌ಗಳ ವಿರುದ್ಧವಾಗಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಮಾನ್ಯ ಉಚ್ಛ ನ್ಯಾಯಾಲಯವು ನೋಟೀಸ್‌ಗಳ ಕುರಿತಂತೆ ಬಾಕಿ ವಸೂಲಾತಿಗೆ ತಡೆಯಾಜ್ಞೆ ನೀಡರುತ್ತದೆ. ನ್ಯಾಯಾಲಯದ ಪ್ರಕರಣಗಳ ಇತ್ತೀಚಿನ ಸ್ಥಿತಿಗಳನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ.

ವಿವಿಧ ಉದ್ದೇಶಗಳಿಗಾಗಿ ಅರಣ್ಯ ಜಮೀನುಗಳನ್ನು ಗುತ್ತಿಗೆ ನೀಡಿರುವ ಪ್ರಕರಣಗಳ ಪರಿಶೀಲನೆ/ಗೇಣಿ ವಸೂಲಾತಿ/ ಅರಣ್ಯ ಪ್ರದೇಶಗಳನ್ನು ಇಲಾಖೆಗೆ ಹಿಂಪಡೆಯುವ ಬಗ್ಗೆ ಪರಿಶೀಲಿಸಲು ಹಾಗೂ ನ್ಯಾಯಾಲಯದಲ್ಲಿರುವ ಪ್ರಕರಣಗಳ ಪರಿಶೀಲನೆ ಹಾಗೂ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಲು ಹಾಗೂ ನ್ಯಾಯಾಲಯದ ಆದೇಶಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ಅಪಜೀ 47 ಎಫ್‌ಎಲ್‌ಎಲ್ 2024 ದಿನಾಂಕ:23.01.2024ರಲ್ಲಿ ಕಾರ್ಯಪಡೆಯನ್ನು ರಚಿಸಲಾಗಿದೆ. **ಅನುಬಂಧ-2 ರಲ್ಲಿ ಲಗತ್ತಿಸಿದೆ.**

ಕಾರ್ಯಪಡೆಯು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಹಲವಾರು ಸಭೆಗಳನ್ನು ನಡೆಸಿ ಎಲ್ಲಾ ಅಗತ್ಯ ದಾಖಲೆಗಳನ್ನು ಸಂಗ್ರಹಿಸಿ ಅಡ್ವೋಕೇಟ್ ಜನರಲ್ ಕಚೇರಿಗೆ ಒದಗಿಸಲಾಗಿದೆ ಮತ್ತು ಆದ್ಯತೆಯ ಆಧಾರದ ಮೇಲೆ ವಿಷಯವನ್ನು ನ್ಯಾಯಾಲಯದಲ್ಲಿ ತೆಗೆದುಕೊಳ್ಳುವಂತೆ ವಿನಂತಿಸಲಾಗಿದೆ. ಕಾರ್ಯಪಡೆಯ ಸಭೆಗಳ ನಡಾವಳಿಗಳನ್ನು **ಅನುಬಂಧ-3 ರಲ್ಲಿ ಲಗತ್ತಿಸಿದೆ.**

ನ್ಯಾಯಾಲಯದಲ್ಲಿ ಈ ಪ್ರಕರಣಗಳ ತ್ವರಿತ ಇತ್ಯರ್ಥಕ್ಕಾಗಿ ಸರ್ಕಾರದ ಪರವಾಗಿ ಅಡ್ವೋಕೇಟ್ ಜನರಲ್, ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಇವರಿಗೆ ಪತ್ರ ಬರೆಯಲಾಗಿದ್ದು, **ಅನುಬಂಧ-4 ರಲ್ಲಿ ಲಗತ್ತಿಸಿದೆ.**

**ಸಂಖ್ಯೆ: ಎಫ್‌ಇಇ 305 ಎಫ್‌ಎಲ್‌ಎಲ್ 2024**

Blland

**(ಈಶ್ವರ ಬಿ ಖಂಡ್ರೆ)**

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ

ಸಚಿವರು

ಅನುಬಂಧ -1

ಅನುಬಂಧ-1

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ವಿವರ:

| ಕ್ರ. ಸಂ | ವಿವರ |
|---|---|
| 1 | **ಪೋರ್ಟ್ ಲ್ಯಾಂಡ್ ರಬ್ಬರ್ ಕಂಪನಿ:-**<br>ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 02-05-1998, 12-04-2000 ಹಾಗೂ 24-12-2003 ರಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿರಾಜಪೇಟೆರವರು ಗುತ್ತಿಗೆ ಹಣ ಪಾವತಿ ಮಾಡಲು ನೋಟಿಸ್ಸು ಪತ್ರ ನೀಡಿರುತ್ತಾರೆ.<br>ಸದರಿ ನೋಟಿಸ್ಸಿಗೆ ವಿರುದ್ಧವಾಗಿ ಸದರಿ ಕಂಪೆನಿಯವರು ರಿಟ್ ಪಿಟಿಷನ್: 30020/2000 ರಂತೆ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ದಾವೆ ಹೂಡಿರುತ್ತಾರೆ. ಸದರಿ ದಾವೆಗೆ ಸಂಬಂಧಿಸಿದಂತೆ, ಸದರಿ ಪ್ರದೇಶವು ಸರ್ಕಾರಿ ಮೀಸಲು ಅರಣ್ಯ ಪ್ರದೇಶವಾಗಿರುತ್ತದೆ. ಗುತ್ತಿಗೆ ಪಾವತಿಯ ಹಣ ಹಾಗೂ ಮರ ಮೌಲ್ಯಕ್ಕೆ ಸಂಬಂಧಿಸಿದಂತೆ ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಡಗು ವೃತ್ತರವರು ವಿಚಾರಣೆ ನಡೆಸಿ ಕ್ರಮ ಕೈಗೊಳ್ಳುವಂತೆ ಹಾಗೂ ಗುತ್ತಿಗೆ ಅವಧಿಯನ್ನು ಸರ್ಕಾರ ನಿರ್ಧರಿಸಬೇಕೆಂದು ಘನ ನ್ಯಾಯಾಲಯದ ಆದೇಶವಾಗಿರುತ್ತದೆ. ನಂತರ ಸದರಿ ಕಂಪೆನಿಯವರು ರಿಟ್ ಪಿಟಿಷನ್: 30020/2000 ರ ಆದೇಶದ ವಿರುದ್ಧ ರಿಟ್ ಮೇಲ್ಮನವಿ 880/2000 ನ್ನು ದಾಖಲಿಸಿರುತ್ತಾರೆ. ಸದರಿ ಮೇಲ್ಮನವಿಯಂತೆ ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಡಗು ವೃತ್ತ ರವರ ವಿಚಾರಣಾ ವರದಿಯ ಆಧಾರದ ಮೇಲೆ ಸದರಿ ಜಾಗವು ಮೀಸಲು ಅರಣ್ಯವೆಂದು ಆದೇಶವಾಗಿರುತ್ತದೆ.<br>ದಿನಾಂಕ: 09-11-2015 ರ ಪತ್ರ ಸಂಖ್ಯೆ: ಭೂಮಿ/ಬ್ರಿಟಿಷ್ ಗುತ್ತಿಗೆ/ಸಿಆರ್-17/2015-16 ಮತ್ತು ದಿನಾಂಕ: 14-03-2015 ವರೆಗೆ ಗುತ್ತಿಗೆ ಹಣ ರೂ. 2,24,99,11,765.00 ನ್ನು ಪಾವತಿ ಮಾಡುವುದಕ್ಕೆ ಹಾಗೂ ಪ್ರತಿ ದಿನಕ್ಕೆ ರೂ. 11,09,546.00 ನ್ನು ಬಾಕಿ ಹಣ ಪಾವತಿ ಮಾಡುವ ದಿನದವರೆಗೂ ಪಾವತಿಸುವಂತೆ ದಿನಾಂಕ: 04-03-2016 ರಂದು ನೋಟಿಸ್ಸನ್ನು ಜಾರಿ ಮಾಡಿರುತ್ತಾರೆ. ಮುಂದುವರೆದು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಜಾಗೃತ), ಬೆಂಗಳೂರುರವರು ದಿನಾಂಕ: 21-08-2015 ರಂದು ಕಛೇರಿ ಪತ್ರ ಸಂಖ್ಯೆ: APCCF(VIG)/ಬ್ರಿಟಿಷ್ ಲೀಸ್/ಸಿಆರ್-550/2015-16 ರಂತೆ ಸದರಿ ಪೋರ್ಟ್ ಲ್ಯಾಂಡ್ ಗುತ್ತಿಗೆ ಪ್ರದೇಶವು ಇಲಾಖೆಯ ಸುಪರ್ದಿಗೆ ಪಡೆಯಲು ಆದೇಶ ಮಾಡಿರುತ್ತಾರೆ. ಸದರಿ ಆದೇಶದ ವಿರುದ್ಧ ಕಂಪೆನಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP: 47317/2013 ರಂತೆ ವಜಾಗೊಳಿಸಲು ದಾವೆ ಹೂಡಿರುತ್ತದೆ. ಪ್ರಸ್ತುತ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುತ್ತದೆ. ಪ್ರಸ್ತುತ ತಡೆಯಾಜ್ಞೆ ಇರುತ್ತದೆ. |
| 2 | **ಟಾಟಾ ಕಾಫಿ ಲಿಮಿಟೆಡ್,:-**<br>ದಿನಾಂಕ: 21-08-2015 ರಂದು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಜಾಗೃತ), ಬೆಂಗಳೂರುರವರ ಕಛೇರಿ ಪತ್ರ ಸಂಖ್ಯೆ: APCCF(Vig)/British lease/CR-54/2015-16 ರಲ್ಲಿ ಗುತ್ತಿಗೆ ನೀಡಿದ ಪ್ರದೇಶವನ್ನು ಸರ್ಕಾರಕ್ಕೆ ನೀಡಲು ಹಾಗೂ ಬಾಕಿ ಗುತ್ತಿಗೆ ಹಣ ಪಾವತಿ ಮಾಡುವಂತೆ ಆದೇಶಿಸಿರುತ್ತಾರೆ. ಸದರಿ ಆದೇಶದ ಮೇಲೆ ರಿಟ್ ಪಿಟಿಷನ್ ಸಂಖ್ಯೆ: 28940/2015 ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ದಿನಾಂಕ: 05-03-2021 ರಂದು ಗೌರವಾನ್ವಿತ ಉಚ್ಚ ನ್ಯಾಯಾಲಯ ಸದರಿ ರಿಟ್ ಪಿಟಿಷನ್ ಗೆ ಸಂಬಂಧಿಸಿದಂತೆ ಕೆಳಹಂತದ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಲು ಸೂಚಿಸಿ ಆದೇಶಿಸಿರುತ್ತಾರೆ. ಸದರಿ ಉಚ್ಚ ನ್ಯಾಯಾಲಯವು ಆದೇಶಿಸಿರುವಂತೆ ಮಾನ್ಯ ಘನ ಹಿರಿಯ ನ್ಯಾಯಾಲಯ, ವಿರಾಜಪೇಟೆ ಇಲ್ಲಿ OS No: 34/2013 ರಂತೆ ದಾವೆ ದಾಖಲಾಗಿರುತ್ತದೆ ಮತ್ತು ಮಾನ್ಯ ಹಿರಿಯ ನ್ಯಾಯಾಲಯ, ವಿರಾಜಪೇಟೆ ರವರ ಆದೇಶದಂತೆ |

| | |
|---|---|
| | ಪ್ರಕರಣವು ಸರ್ಕಾರದ ಪರ ಆದೇಶವಾಗಿರುತ್ತದೆ. ಸದರಿ ಆದೇಶದ ವಿರುದ್ಧ ದಿನಾಂಕ: 21-12-2021 ರಂದು ಸದರಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ RFA No: 1387/2021 ರಂತೆ ದಾವೆ ಹೂಡಿರುತ್ತಾರೆ. ಪ್ರಕರಣವು ಸಧ್ಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. ಪ್ರಸ್ತುತ ತಡೆಯಾಜ್ಞೆ ಇರುತ್ತದೆ. |
| 3 | **ಮೆ: ಗ್ಲೆನ್ ಲೋರೆನ್ ಪ್ಲಾಂಟೇಶನ್ಸ್ ಪ್ರೈವೇಟ್ ಲಿಮಿಟೆಡ್:-**<br>ದಿನಾಂಕ: 21-08-2015 ರಂದು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಜಾಗೃತ), ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ: APCCF(Vig)/British lease/CR-53/2015-16 ರಲ್ಲಿ ಗುತ್ತಿಗೆ ನೀಡಿದ ಪ್ರದೇಶವನ್ನು ಸರ್ಕಾರಕ್ಕೆ ನೀಡಲು ಹಾಗೂ ಬಾಕಿ ಗುತ್ತಿಗೆ ಹಣ ಪಾವತಿ ಮಾಡುವಂತೆ ಆದೇಶಿಸಿರುತ್ತಾರೆ. ಸದರಿ ಆದೇಶದ ಮೇಲೆ ರಿಟ್ ಪಿಟಿಷನ್ ಸಂಖ್ಯೆ: 43061/2015 ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ನಂತರ ದಿನಾಂಕ: 01-10-2015 ರಂತೆ ಮಾನ್ಯ ಘನ ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತಾರೆ. ನಂತರ ದಿನಾಂಕ: 09-11-2015 ರಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತರವರ ಕಛೇರಿ ಪತ್ರ ಸಂಖ್ಯೆ:ಭೂಮಿ/ಬ್ರಿಟಿಷ್ ಲೀಸ್/ಸಿಆರ್-18/2015-16 ರಂತೆ ಗುತ್ತಿಗೆ ಹಣ ರೂ. 51,84,86,159.00 ನ್ನು ಪಾವತಿ ಮಾಡುವಂತೆ ಸದರಿಯವರಿಗೆ ಆದೇಶಿಸಿರುತ್ತಾರೆ. ಸದರಿ ಆದೇಶದ ವಿರುದ್ಧ ಮಾನ್ಯ ಘನ ಉಚ್ಚ ನ್ಯಾಯಾಲಯದಲ್ಲಿ WP No: 55439/2015 ರಂತೆ ದಾವೆ ಹೂಡಿರುತ್ತಾರೆ. ದಿನಾಂಕ: 10-12-2015 ರಲ್ಲಿ ಗೌರವಾನ್ವಿತ ಉಚ್ಚ ನ್ಯಾಯಾಲಯವು ಸದರಿ ಪ್ರಕರಣವು ಕೆಳಹಂತದ ನ್ಯಾಯಾಲಯದಲ್ಲಿದ್ದು, ಅಲ್ಲಯೇ ಬಗೆಹರಿಸಿಕೊಳ್ಳಲು ಸೂಚಿಸಿ ಆದೇಶಿಸಿರುತ್ತಾರೆ. ಸದರಿ ಉಚ್ಚ ನ್ಯಾಯಾಲಯವು ಆದೇಶಿಸಿರುವಂತೆ ಮಾನ್ಯ ಘನ ಹಿರಿಯ ನ್ಯಾಯಾಲಯ, ವಿರಾಜಪೇಟೆ ಇಲ್ಲಿ (OS No: 103/2013) ದಾಖಲಾಗಿದ್ದು, ನಂತರ ಸದರಿ ಘನ ನ್ಯಾಯಾಲಯವು ಸರ್ಕಾರದ ಪರ ಆದೇಶ ಹೊರಡಿಸಿರುತ್ತಾರೆ. ನಂತರ ಸದರಿ ಆದೇಶದ ವಿರುದ್ಧ ದಿನಾಂಕ: 23-12-2021 ರಂದು ಸದರಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ RFA No: 1941/2021 ರಂತೆ ದಾವೆ ಹೂಡಿರುತ್ತಾರೆ. ಪ್ರಕರಣವು ಸಧ್ಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.<br><br>ಮುಂದುವರೆದು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಮೇಲೆ ತಿಳಿಸಿದ 03 ಪ್ರಕರಣಗಳಿಗೆ ಸಂಬಂಧಿಸಿದಂತೆ ಗುತ್ತಿಗೆ ನೀಡಿದ ಭೂಮಿಯನ್ನು ಹಾಗೂ ಗುತ್ತಿಗೆ ಹಣವನ್ನು ಪಾವತಿ ಮಾಡುವಂತೆ ಸಂಬಂಧಿಸಿದ ಕಂಪೆನಿಗಳಿಗೆ ಆದೇಶ ಮಾಡಿ ನೋಟಿಸ್ಸು ಜಾರಿ ಮಾಡಿರುತ್ತಾರೆ. ಸದರಿ ಆದೇಶದಂತೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಡಗು ವೃತ್ತ, ಮಡಿಕೇರಿರವರು ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವಿರಾಜಪೇಟೆ ವಿಭಾಗ, ವಿರಾಜಪೇಟೆರವರು ಮೇಲಾಧಿಕಾರಿಗಳ ಆದೇಶದನ್ವಯ ಕಂಪೆನಿಗಳಿಗೆ ನೋಟಿಸ್ಸನ್ನು ನೀಡಿದ್ದು, ಸದರಿ ಕಂಪೆನಿಯವರು ಇಲಾಖೆಯ ಅಧಿಕಾರಿಗಳು ನೀಡಿದ್ದ, ಯಾವುದೇ ನೋಟಿಸ್ಸಿಗೆ ಸ್ಪಂದಿಸದೆ ನ್ಯಾಯಾಲಯದಲ್ಲಿ ಇಲಾಖೆಯ ವಿರುದ್ಧ ದಾವೆಯನ್ನು ಹೂಡಿದ್ದು ಮತ್ತು ಸದರಿ ದಾವೆಗೆ ಸಂಬಂಧಿಸಿದಂತೆ ಇಲಾಖೆಯ ಮುಖಾಂತರ ನ್ಯಾಯಾಲಯದಲ್ಲಿ ಪ್ರಕರಣದ ವಿರುದ್ಧ ಆಕ್ಷೇಪಣೆಯನ್ನು ಸಲ್ಲಿಸಲಾಗಿರುತ್ತದೆ. ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ದಿನಾಂಕ: 12-12-2024 ರಂದು ವಿಚಾರಣೆ ನಿಗದಿಯಾಗಿರುತ್ತದೆ. ಪ್ರಸ್ತುತ ತಡೆಯಾಜ್ಞೆ ಇರುತ್ತದೆ. |

| | |
|---|---|
| 4 | **ನಿಲಾಂಬುರ್ ರಬ್ಬರ್ ಕಂಪನಿ ಲಿಮಿಟೆಡ್**<br><br>ದಿನಾಂಕ 09.11.2015ರಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ ಮಡಿಕೇರಿ ಇವರು ನೀಲಾಂಬೂರ್ ರಬ್ಬರ್ ಕಂಪೆನಿಯಿಂದ ದಿನಾಂಕ 14.03.2015ರವರೆಗೆ ಬಾಕಿ ಇದ್ದ ಗುತ್ತಿಗೆ ಹಣ (ಬಡ್ಡಿ ಸೇರಿಸಿ) ರೂ.130,22,16,277/-ಗಳನ್ನು ಪಾವತಿಸಲು ನೋಟೀಸು ನೀಡಿರುತ್ತಾರೆ. ಸದರಿ ಕಂಪೆನಿಯವರು ಈ ನೋಟೀಸಿನ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ.55037-38/2015ನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ 09.12.2015ರಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ, ಮಡಿಕೇರಿ ಇವರು ನೀಡಿದ ಬೇಡಿಕೆ ನೋಟಿಸ್‌ಗೆ ತಡೆಯಾಜ್ಞೆ ನೀಡಿರುತ್ತದೆ. ಈ ಪ್ರಕರಣದಲ್ಲಿ ಆಕ್ಷೇಪಣಾ ಹೇಳಿಕೆಗಳನ್ನು ಪ್ರಮಾಣ ಪತ್ರದೊಂದಿಗೆ ಸಲ್ಲಿಸಲಾಗಿದೆ. |
| 5 | **ಥಾಮ್‌ಸನ್ ಪ್ಲಾಂಟೇಶನ್ (ಇಂಡಿಯ) ಪ್ರೈವೇಟ್ ಲಿಮಿಟೆಡ್**<br>ದಿನಾಂಕ 09.11.2015ರಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ, ಮಡಿಕೇರಿ ಇವರು ಥಾಮ್‌ಸನ್ ಪ್ಲಾಂಟೇಷನ್ ಕಂಪೆನಿಯಿಂದ ದಿನಾಂಕ 14.03.2015ರವರೆಗೆ ಬಾಕಿ ಇದ್ದ ಗುತ್ತಿಗೆ ಹಣ (ಬಡ್ಡಿ ಸೇರಿಸಿ) ರೂ.91,29,28,367/-ಗಳನ್ನು ಪಾವತಿಸಲು ನೋಟೀಸ್ ನೀಡಿರುತ್ತಾರೆ. ಸದರಿ ಕಂಪೆನಿಯವರು ಈ ನೋಟೀಸಿನ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ.55866/2015ನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ 10.12.2015ರಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ ಇವರು ನೀಡಿದ ಬೇಡಿಕೆ ನೋಟೀಸಿಗೆ ತಡೆಯಾಜ್ಞೆ ನೀಡಿರುತ್ತದೆ. ಈ ಪ್ರಕರಣದಲ್ಲಿ ಆಕ್ಷೇಪಣಾ ಹೇಳಿಕೆಗಳನ್ನು ಪ್ರಮಾಣ ಪತ್ರದೊಂದಿಗೆ ಸಲ್ಲಿಸಲಾಗಿದೆ. |
| 6 | **ಮರ್ಕೆರಾ ರಬ್ಬರ್ ಲಿಮಿಟೆಡ್**<br>ದಿನಾಂಕ 03.06.2015ರಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ, ಮಡಿಕೇರಿ ಇವರು ಮರ್ಕೆರಾ ರಬ್ಬರ್ ಕಂಪೆನಿಯಿಂದ ದಿನಾಂಕ 14.03.2015ರವರೆಗೆ ಬಾಕಿ ಇದ್ದ ಗುತ್ತಿಗೆ ಹಣ (ಬಡ್ಡಿ ಸೇರಿಸಿ) ರೂ.454,24,04,624/-ಗಳನ್ನು ಪಾವತಿಸಲು ನೋಟೀಸು ನೀಡಿರುತ್ತಾರೆ. ಸದರಿ ಕಂಪೆನಿಯವರು ಈ ನೋಟೀಸಿನ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ.30151-53/2015ನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ 24.07.2015ರಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ಮಡಿಕೇರಿ ಇವರು ನೀಡಿದ ಬೇಡಿಕೆ ನೋಟೀಸಿಗೆ ತಡೆಯಾಜ್ಞೆ ನೀಡಿರುತ್ತದೆ. ಈ ಪ್ರಕರಣದಲ್ಲಿ ಆಕ್ಷೇಪಣಾ ಹೇಳಿಕೆಗಳನ್ನು ಪ್ರಮಾಣ ಪತ್ರದೊಂದಿಗೆ ಸಲ್ಲಿಸಲಾಗಿದೆ. |
| 7 | **ನೀಲಗಿರಿ ಪ್ಲಾಂಟೇಷನ್ ಪ್ರೈ ಲಿ., ಹೊನ್ನಮೇಟಿ**<br>ದಿನಾಂಕ 06.12.2006ರಲ್ಲಿ ಡಿಮ್ಯಾಂಡ್ ನೋಟೀಸಿನ ವಿರುದ್ಧ ಸದರಿ ಕಂಪೆನಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ.17614/2006ರಂತೆ ದಾವೆ ಹೂಡಿರುತ್ತಾರೆ. ದಿನಾಂಕ 09.09.2008ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಅರ್ಜಿಯನ್ನು ಖುಲಾಸೆ ಮಾಡಿ ಗುತ್ತಿಗೆ ಹಣವನ್ನು ನಿಗಧಿಪಡಿಸುವ ಬಗ್ಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 109 ಮತ್ತು ಸಬ್ ಸೆಕ್ಷನ್ 02ರಂತೆ ವಿಚಾರಣೆ ನಡೆಸಿ ಗುತ್ತಿಗೆ ಹಣ ನಿಗಧಿ ಪಡಿಸುವ ಬಗ್ಗೆ ಆದೇಶ ಹೊರಡಿಸಿರುತ್ತಾರೆ. ಸದರಿ ರಿಟ್ ಅರ್ಜಿಯ ಮೇಲೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲ್ ಸಂಖ್ಯೆ.1684/2008 ದಿನಾಂಕ 23.10.2008ರಲ್ಲಿ ದಾವೆ ಹೂಡಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅಪೀಲ್ ನ್ನು ವಜಾಗೊಳಿಸಿ ರಿಟ್ ಅರ್ಜಿ ಸಂಖ್ಯೆ.17614/2006ರ ಆದೇಶ ದಿನಾಂಕ 09.09.2008ರಲ್ಲಿ ನೀಡಿರುವ ಆದೇಶವನ್ನು ಎತ್ತಿ ಹಿಡಿದಿರುತ್ತದೆ. ಈ ಬಗ್ಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಚಾಮರಾಜನಗರ ರವರು ವಿಚಾರಣೆ ಕೈಗೊಂಡು ಗುತ್ತಿಗೆ ಹಣ 25,36,88,848/- ಪಾವತಿಸುವಂತೆ ಹಾಗೂ ಪರಿಷ್ಕೃತ |

| | |
|---|---|
| | ಗುತ್ತಿಗೆ ದರ ಪ್ರತಿ ದಿನಕ್ಕೆ ರೂ.125107/- ದಿನ ಭತ್ಯೆ ಪಾವತಿಸುವಂತೆ ಆದೇಶ ಹೊರಡಿಸಿರುತ್ತದೆ. ಈ ಆದೇಶದ ವಿರುದ್ಧ ಸದರಿ ಕಂಪೆನಿಯವರು ರಿಟ್ ಅರ್ಜಿ ಸಂಖ್ಯೆ.52467-52471/2015ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ರೂ.25.00 ಲಕ್ಷ ಠೇವಣಿ ಇಡುವಂತೆ ಮತ್ತು ಯಥಾಸ್ಥಿತಿ ಕಾಪಾಡುವಂತೆ ದಿನಾಂಕ 26.11.2015ಲ್ಲಿ ಮಧ್ಯಂತರ ಆದೇಶ ಹೊರಡಿಸಿರುತ್ತದೆ. ಈಗಾಗಲೇ ಆಕ್ಷೇಪಣಾ ಹೇಳಿಕೆ ಸಲ್ಲಿಸಲಾಗಿದೆ. ತದನಂತರ ರಿಟ್ ಅರ್ಜಿ ಸಂಖ್ಯೆ.41514/2015 ಮತ್ತು ರಿಟ್ ಅರ್ಜಿ ಸಂಖ್ಯೆ.41511/2015 ಜೊತೆಗೂಡಿಸಿ ವಿಚಾರಣೆ ನಡೆಸಲು ಆದೇಶಿಸಲಾಗಿದೆ. ಈ ವಿಚಾರಣೆ ವಿವಿಧ ದಿನಾಂಕಗಳಲ್ಲಿ ನಡೆದಿರುತ್ತದೆ. |

(8)

S-Y226442

ಅನುಬಂಧ -2

50285

# ಕರ್ನಾಟಕ ಸರ್ಕಾರ

**ವಿಷಯ:** ವಿವಿಧ ಉದ್ದೇಶಗಳಿಗೆ ಆರಣ್ಯ ಜಮೀನುಗಳನ್ನು ಗುತ್ತಿಗೆ ನೀಡಿರುವ ಪ್ರಕರಣಗಳ ಪರಿಶೀಲನೆ/ ಗೇಣಿ ವಸೂಲಾತಿ/ ಅರಣ್ಯ ಪ್ರದೇಶಗಳನ್ನು ಇಲಾಖೆಯು ಹಿಂಪಡೆಯುವ ಬಗ್ಗೆ ಪರಿಶೀಲಿಸಲು ಕಾರ್ಯಪಡೆ ರಚನೆ ಕುರಿತು.

**ಉಲ್ಲೇಖ:** ಮಾನ್ಯ ಆರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 09.01.2024ರಂದು ಜರುಗಿದ ಸಭೆ.

*****

**ಪ್ರಸ್ತಾವನೆ:**

ರಾಜ್ಯದಲ್ಲಿ ಕೊಡಗು ಮತ್ತು ಚಾಮರಾಜನಗರ ಅರಣ್ಯ ವೃತ್ತಗಳಲ್ಲಿ ವಿವಿಧ ಉದ್ದೇಶಗಳಿಗೆ ಅರಣ್ಯ ಜಮೀನುಗಳನ್ನು ಗುತ್ತಿಗೆ ನೀಡಿರುವ ಪ್ರಕರಣಗಳ ಪರಿಶೀಲನೆ/ಗೇಣಿ ವಸೂಲಾತಿ ಇತ್ಯಾದಿ ವಿಷಯಗಳ ಬಗ್ಗೆ ಚರ್ಚಿಸಲು ದಿನಾಂಕ 09.01.2024ರಂದು ಸನ್ಮಾನ್ಯ ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿದೆ. ಈ ಗುತ್ತಿಗೆ ನೀಡಿರುವ ಅರಣ್ಯ ಪ್ರದೇಶಗಳು ಪಶ್ಚಿಮ ಘಟ್ಟದ ಹಾಗೂ ಬೆಲೆ ಬಾಳುವ ಅರಣ್ಯ ಪ್ರದೇಶಗಳಿಗೆ ಒಳಪಟ್ಟಿರುತ್ತದೆ. ಈ ಗುತ್ತಿಗೆದಾರರು ಹಲವಾರು ದಶಕಗಳಿಂದ ದೊಡ್ಡ ಪ್ರಮಾಣದ ಅರಣ್ಯ ಜಮೀನನ್ನು ಗುತ್ತಿಗೆ ಪಡೆದಿದ್ದು, ಸತತವಾಗಿ ರಾಜ್ಯಕ್ಕೆ ಗುತ್ತಿಗೆ ಹಣವನ್ನು ನೀಡುವುದರಲ್ಲಿ ವಿಫಲರಾಗಿದ್ದು, ವಿನಾ ಕಾರಣ ನ್ಯಾಯಾಲಯದ ಮೊರೆ ಹೋಗಿರುವುದು ಕಂಡುಬಂದಿರುತ್ತದೆ. ಇಂತಹ ಪ್ರಕರಣಗಳನ್ನು ನ್ಯಾಯಾಲಯದಲ್ಲಿ ಕೂಡಲೆ ಇತ್ಯರ್ಥಪಡಿಸಿ ಅರಣ್ಯ ಪ್ರದೇಶಗಳನ್ನು ಕ್ರೂಢೀಕರಿಸಿ ಸಂರಕ್ಷಿಸಲು ಅನುವಾಗುವಂತೆ ವಿಶಿಷ್ಟವಾಗಿ ಒಂದು ಕಾರ್ಯಪಡೆ ರಚಿಸಲು ಮಾನ್ಯ ಸಚಿವರು ಆದೇಶಿಸಿರುವ ಹಿನ್ನಲೆಯಲ್ಲಿ ಈ ಕೆಳಗಿನ ಕಾರ್ಯಪಡೆಯನ್ನು ರಚಿಸಲು ತೀರ್ಮಾನಿಸಿ, ಈ ಕೆಳಗಿನ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಎಫ್‌ಇಇ 47 ಎಫ್‌ಎಲ್‌ಎಲ್ 2024,**
**ದಿನಾಂಕ:23.01.2024**

LR

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ ಅರಣ್ಯ ಜಮೀನು ಗುತ್ತಿಗೆ ನೀಡಿರುವ ಪ್ರಕರಣಗಳ ಪರಿಶೀಲನೆ, ಗೇಣಿ ವಸೂಲಾತಿ ಹಾಗೂ ಇತರೆ ಸಂಬಂಧಿತ ವಿಷಯಗಳ ಪರಿಶೀಲನೆಗಾಗಿ ಈ ಕೆಳಕಂಡಂತೆ ಕಾರ್ಯಪಡೆ ರಚಿಸಿ ಆದೇಶಿಸಲಾಗಿದೆ.

| | | |
|---|---|---|
| 1. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪರಿಸರ ಇಲಾಖೆ Ex-Officio ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ | ಅಧ್ಯಕ್ಷರು |
| 2. | ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಾನೂನು ಕೋಶ | ಸದಸ್ಯರು |
| 3. | ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಭೂ ದಾಖಲೆ | ಸದಸ್ಯ ಕಾರ್ಯದರ್ಶಿ |
| 4. | ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ | ಸದಸ್ಯರು |
| 5. | ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ ಚಾಮರಾಜನಗರ ವೃತ್ತ. | ಸದಸ್ಯರು |
| 6. | ಉಪ/ಜಂಟಿ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ | ಸದಸ್ಯರು |

...2)

ಸಂರಕ್ಷಣಾಧಿಕಾರಿಯವರ ಕಛೇರಿ
25 JAN 2024

29/1/24

AO(0)3

ಕಾರ್ಯಪಡೆಯ ಅಧ್ಯಕ್ಷರು ಅವಶ್ಯವಿರುವ ಅಧಿಕಾರಿಗಳನ್ನು ಕಾರ್ಯಪಡೆಗೆ ಸೇರ್ಪಡೆಗೊಳಿಸಿಕೊಂಡು ಸಹಕಾರ ಪಡೆಯಬಹುದಾಗಿದೆ.

ಈ ಕಾರ್ಯಪಡೆಯು ಕೆಳಕಂಡಂತೆ ಕಾರ್ಯ ನಿರ್ವಹಿಸತಕ್ಕದ್ದು.

1. ಅರಣ್ಯ ಪ್ರದೇಶಗಳಲ್ಲಿ ನೀಡಲಾಗಿರುವ ವಿವಿಧ ಗುತ್ತಿಗೆ ಪ್ರಕರಣಗಳನ್ನು ಪರಿಶೀಲಿಸುವುದು.
2. ನ್ಯಾಯಾಲಯಗಳಲ್ಲಿರುವ ಪ್ರಕರಣಗಳ ಪರಿಶೀಲನೆ ಮತ್ತು ಪ್ರಕರಣಗಳನ್ನು ಇತ್ಯರ್ಥ ಪಡಿಸಲು ಕ್ರಮಗಳನ್ನು ಕೈಗೊಳ್ಳುವುದು,
3. ನ್ಯಾಯಾಲಯದ ಆದೇಶಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸುವುದು.
4. ಅವಶ್ಯಕತೆಗನುಗುಣವಾಗಿ ಸರ್ಕಾರದ ಶಾಸನಬದ್ಧ ಆದೇಶಗಳನ್ನು ಪಡೆಯುವುದು.
5. ಕಾರ್ಯಪಡೆಯು ಪ್ರತಿ ಮಾಹೆ ಪರಿಶೀಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

20.8.5

**(ಬಿ.ಶಿವಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.
(ಅರಣ್ಯ-ಸಿ ಮತ್ತು ಸಮನ್ವಯ)

**ಪ್ರತಿಯನ್ನು;**

1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ಇವರಿಗೆ ಮಾಹಿತಿಗಾಗಿ
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಇಡಬ್ಲ್ಯೂಪಿಆರ್‌ಟಿ & ಸಿಸಿ), ಬೆಂಗಳೂರು ಇವರಿಗೆ ಮಾಹಿತಿಗಾಗಿ
3. ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿಗಾಗಿ
4. ಮಾನ್ಯ ಅರಣ್ಯ ಸಚಿವರ ಆಪ್ತ ಕಾರ್ಯದರ್ಶಿ, ಅಪಜೀ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ

FEE/47/FLL 2024

ಅನುಬಂಧ-3

ಕರ್ನಾಟಕ ಸರ್ಕಾರ

ಸಂಖ್ಯೆ:ಅಪಜೀ/67/ಪ್ರಕಾ(ಜೀಶಿವ)2024

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:22-04-2024.

ಟಿಪ್ಪಣಿ

ವಿಷಯ: ದಿನಾಂಕ:12-04-2024ರಂದು ನಡೆದ ಅರಣ್ಯ ಜಮೀನು ಗುತ್ತಿಗೆ ನೀಡಿರುವ ಪ್ರಕರಣಗಳ ಪರಿಶೀಲನೆ, ಗೇಣಿ ವಸೂಲಾತಿ ಹಾಗೂ ಇತರೆ ವಿಷಯಗಳ ಪರಿಶೀಲನಾ ಸಭೆಯ ನಡವಳಿ ಕಳುಹಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:12-04-2024ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪರಿಸರ ಇಲಾಖೆ ಹಾಗೂ ಪದನಿಮಿತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಇವರ ಅಧ್ಯಕ್ಷತೆಯಲ್ಲಿ ನಡೆದ ಅರಣ್ಯ ಜಮೀನು ಗುತ್ತಿಗೆ ನೀಡಿರುವ ಪ್ರಕರಣಗಳ ಪರಿಶೀಲನೆ, ಗೇಣಿ ವಸೂಲಾತಿ ಹಾಗೂ ಇತರೆ ವಿಷಯಗಳ ಪರಿಶೀಲನೆಯ ಕುರಿತ ಸಭೆಯ ನಡವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ. ಸದರಿ ನಡವಳಿಯ ಮೇಲೆ ಕೈಗೊಂಡ ಕ್ರಮದ ಮಾಹಿತಿಯನ್ನು ಒದಗಿಸುವಂತೆ ಕೋರಲು ನಿರ್ದೇಶಿತಳಾಗಿದ್ದೇನೆ.

Sumathi.K.R.
(ಸುಮತಿ.ಕೆ.ಆರ್.)
ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ
ಆಪ್ತ ಕಾರ್ಯದರ್ಶಿ (ಗ್ರೇಡ್-I)
(ಜೀವಿಪರಿಸ್ಥಿತಿ ಮತ್ತು ಪರಿಸರ)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

ಇವರಿಗೆ:-

1. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಾನೂನು ಕೋಶ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
2. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಭೂ ದಾಖಲೆ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ, ಮಡಿಕೇರಿ
4. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ, ಚಾಮರಾಜನಗರ ವೃತ, ಚಾಮರಾಜನಗರ.
5. ಉಪ ಅರಣ್ಯ ಸಂರಕ್ಷಣಾಧಿಕಾರಿ, ಹುಲಿ ಸಂರಕ್ಷಿತ ಅರಣ್ಯ ಪ್ರದೇಶ, ಚಾಮರಾಜನಗರ
6. ಉಪ ಅರಣ್ಯ ಸಂರಕ್ಷಣಾಧಿಕಾರಿ, ಎಂ.ಎಂ. ಹಿಲ್ಸ್ (ವನ್ಯಜೀವಿ), ಕೊಳ್ಳೇಗಾಲ.
7. ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿ
8. ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿರಾಜಪೇಟೆ ವೃತ್ತ, ವಿರಾಜಪೇಟೆ.
9. ಸಕಾರದ ಉಪ/ಜಂಟಿ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿರ ಇಲಾಖೆ, 4ನೇ ಮಹಡಿ, ಬಹುಮಹಡಗಳ ಕಟ್ಟಡ, ಬೆಂಗಳೂರು.

ಪ್ರತಿ ಮಾಹಿತಿಗಾಗಿ:-

1. ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಅರಣ್ಯ), ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.



Generated from eOffice by Devendra Reddy, FEE-ASST(DR)-SECTION -C, ASSISTANT, FOREST DEPARTMENT SEC on 14/11/2024 12:16 PM

Scanned with OKEN Scanner

**ಅರಣ್ಯ ಜಮೀನು ಗುತ್ತಿಗೆ ನೀಡಿರುವ ಪ್ರಕರಣಗಳ ಪರಿಶೀಲನೆ, ಗೇಣಿ ವಸೂಲಾತಿ ಹಾಗೂ ಇತರೆ ವಿಷಯಗಳ ಪರಿಶೀಲನೆಯ ಕುರಿತು ದಿನಾಂಕ:12-04-2024ರಂದು ಬೆಳಿಗ್ಗೆ 11:30 ಗಂಟೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪರಿಸರ ಇಲಾಖೆ ಹಾಗೂ ಪದನಿಮಿತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.**

**ಸಭೆಯಲ್ಲಿ ಹಾಜರಿದ್ದ ಸದಸ್ಯರು.**

1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಾನೂನು ಕೋಶ, ಅರಣ್ಯ ಭವನ, ಬೆಂಗಳೂರು.
2. ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿ.
3. ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿರಾಜಪೇಟೆ ವೃತ್ತ, ವಿರಾಜಪೇಟೆ.
4. ಉಪ ಅರಣ್ಯ ಸಂರಕ್ಷಣಾಧಿಕಾರಿ, ಹುಲಿ ಸಂರಕ್ಷಿತ ಅರಣ್ಯ ಪ್ರದೇಶ, ಚಾಮರಾಜನಗರ.
5. ಉಪ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, 4ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪರಿಸರ ಇಲಾಖೆ ಹಾಗೂ ಪದನಿಮಿತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಇವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು.

ವಿವಿಧ ಉದ್ದೇಶಗಳಿಗೆ ಅರಣ್ಯ ಜಮೀನುಗಳನ್ನು ಗುತ್ತಿಗೆ ನೀಡಿರುವ ಪ್ರಕರಣಗಳ ಪರಿಶೀಲನೆ ನಡೆಸಿ ಗುತ್ತಿಗೆ ಅವಧಿ ಮುಗಿದಿದ್ದಲ್ಲಿ ಸದರಿ ಅರಣ್ಯ ಪ್ರದೇಶಗಳನ್ನು ಅರಣ್ಯ ಇಲಾಖೆಗೆ ಹಿಂಪಡೆಯುವ ಬಗ್ಗೆ ಹಾಗೂ ಸರ್ಕಾರಕ್ಕೆ ಪಾವತಿಸಬೇಕಾಗಿರುವ ಗುತ್ತಿಗೆ ಹಣ ವಸೂಲಾತಿ ಬಗ್ಗೆ ಹಲವಾರು ವರ್ಷಗಳಿಂದ ನ್ಯಾಯಾಲಯಗಳಲ್ಲಿ ಪ್ರಕರಣಗಳು ದಾಖಲಾಗಿದ್ದು, ಅವುಗಳನ್ನು ಪರಿಶೀಲಿಸಿ ತುರ್ತಾಗಿ ಗುತ್ತಿಗೆ ಕೊಟ್ಟಿರುವ ಅರಣ್ಯ ಪ್ರದೇಶ ಮತ್ತು ಗುತ್ತಿಗೆ ಹಣ ವಸೂಲಾತಿಗೆ ಕೈಗೊಂಡ ಕ್ರಮದ ಬಗ್ಗೆ ಪ್ರಸ್ತಾಪಿಸಿದರು.

ನಂತರ ದಿನಾಂಕ:13-02-2024ರ ಸಭೆಯಲ್ಲಿ ಚರ್ಚಿಸಿದಂತೆ ವಿಭಾಗವಾರು ಪ್ರಕರಣಗಳನ್ನು ಪರಿಶೀಲಿಸಿ ಖಚಿತ ಮಾಹಿತಿಯನ್ನು ನೀಡುವಂತೆ ಸೂಚಿಸಲಾಗಿತ್ತು.

1) ಅದರಂತೆ ಮಡಿಕೇರಿ ಜಿಲ್ಲೆಗೆ ಸಂಬಂಧಿಸಿದಂತೆ ಈ ಕೆಳಕಂಡ 06 ಪ್ರಕರಣಗಳ ವಿವರಗಳನ್ನು ಸಭೆಯ ಗಮನಕ್ಕೆ ತಂದರು. (ಅನುಬಂಧ-1)

1. M/s Mercara Rubber Company Ltd. (Kadamakal Rubber Company)- 1074 Acres,
2. M/S Cochin Malaber Rubber Estate & Industries Ltd., (Thomson Plantation)- 625.08 Acres,
3. M/S Nilambur Rubber Company Ltd-713.03 Acres,
4. M/s Portaland Rubber Company Ltd., Makutta -1288.75 Acres
5. Tata Coffee Limited, Bengalore (Glen Lorena Tea Estate)- 923.38 Acres, (950 Acres)
6. M/s Glen Loren Plantation Pvt Ltd (Neroth Plantation Pvt Ltd)- 279.67 /Acres. (Survey no 1/18 of West Nemmadle)

ಈ ಮೇಲಿನ 06 ಕಂಪನಿಗಳು ಸರ್ಕಾರದಿಂದ ಗುತ್ತಿಗೆ ಮೇಲೆ ಅರಣ್ಯ ಪ್ರದೇಶಗಳನ್ನು ಪಡೆದುಕೊಂಡು ರಬ್ಬರ್, ಕಾಫೀ, ಟೀ, ಬೆಳೆಸುತ್ತಿದ್ದಾರೆ. ಅವುಗಳಿಂದ ಬರಬೇಕಾದ ಗುತ್ತಿಗೆ ಹಣ,



Generated from eOffice by Devendra Reddy, FEE-ASST(DR)-SECTION -C, ASSISTANT, FOREST DEPARTMENT SEC on 14/11/2024 12:16 PM
Scanned with OKEN Scanner

ಮರದ ಹಣ (ಮರ ಬಾಬ್ತು ಮೌಲ್ಯ) ಹಾಗೂ ಗುತ್ತಿಗೆ ಅವಧಿಯ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲು ಮಾಡಲಾಗಿದೆ.

ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಡಿಷನಲ್ ಅಡ್ವೋಕೇಟ್ ಜನರಲ್ ರವರ ಬಳಿ 03-04 ಬಾರಿ ಚರ್ಚಿಸಿ ಪ್ರಕರಣಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ 1940ರಲ್ಲಿ ಗುತ್ತಿಗೆ ಅವಧಿಯನ್ನು 999 ವರ್ಷಗಳಿಂದ 99 ವರ್ಷಗಳಿಗೆ ನಿಗದಿಗೊಳಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅಧಿಸೂಚನೆ ಸಂಖ್ಯೆ:No: R.F.281(1)-38 (Rule No:09 ರಲ್ಲಿ ಗುತ್ತಿಗೆ ಅವಧಿಯನ್ನು ಮಾರ್ಪಡಿಸಿ (Page No-307 (Part-1) ನಿಗಧಿಪಡಿಸಲಾಗಿದೆ. **(June-19, 1940ರ ಅಧಿಸೂಚನೆಯ ಪ್ರತಿ ಲಗತ್ತಿಸಿದೆ)**

ತದನಂತರ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಪತ್ರ ಜನವರಿ 17, 2013ರಲ್ಲಿ ಆದೇಶ ಸಂಖ್ಯೆ:ಅಪಜೀ 192 ಎಫ್‌ಎಲ್‌ಎಲ್ 2008 ಬೆಂಗಳೂರು, ದಿನಾಂಕ:19-12-2012ರ ಆದೇಶದಲ್ಲಿ, ದಿನಾಂಕ:-16-04-2008ರ ಮಾನ್ಯ ಉಚ್ಚನ್ಯಾಯಾಲಯದ ರಿಟ್ ಅರ್ಜಿಸಂಖ್ಯೆ:24363/2000 ಮತ್ತು 29739/2000 (ಇತ್ಯಾದಿ) ಆದೇಶದಲ್ಲಿ ವಿವರಿಸಿರುವಂತೆ, ರಬ್ಬರ್ ಕಂಪನಿಗಳ ಗುತ್ತಿಗೆ ಅವಧಿಯನ್ನು **999 ವರ್ಷಗಳಿಗೆ ನಿಗಧಿಪಡಿಸಿ ಆದೇಶಿಸಿದೆ.**

ಈ ಆದೇಶದ ವಿರುದ್ಧ 04 ರಬ್ಬರ್ ಕಂಪನಿಗಳಾದ Mercara, Nilambur, Portaland, Sampaje ಗಳು ರಿಟ್ ಅರ್ಜಿಸಂಖ್ಯೆ: 4706 ರಿಂದ 4710/2013 ರಲ್ಲಿ ದಾವೆಯನ್ನು ದಾಖಲು ಮಾಡಲಾಗಿರುತ್ತದೆ.

ರಿಟ್ ಅರ್ಜಿಸಂಖ್ಯೆ:4706 ರಿಂದ 4710/2013 ಪ್ರಕರಣವು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವ ಎಲ್ಲಾ ಪ್ರಕರಣಗಳನ್ನು ಗಮನಿಸಿದಾಗ ಅತ್ಯಂತ ಪ್ರಮುಖ ಪ್ರಕರಣವಾಗಿದ್ದು, ಅಡಿಷನಲ್ ಅಡ್ವೋಕೇಟ್ ಜನರಲ್, ಶ್ರೀ ಕಿರಣ್ ವಿ ರೋನ್ ಇವರೊಂದಿಗೆ ಚರ್ಚಿಸಿದಾಗ ಅವರ ಅಭಿಪ್ರಾಯದೊಂದಿಗೆ ಈ ಪ್ರಕರಣಗಳನ್ನು ಆದ್ಯತೆಯ ಮೇರೆಗೆ ತೆಗೆದುಕೊಳ್ಳುವಂತೆ ಪ್ರಸ್ತಾಪಿಸಿರುತ್ತಾರೆ. ಸದರಿ ಪ್ರಸ್ತಾಪನೆಯನ್ನು ಸಭೆಯ ಮುಂದಿಟ್ಟು ಸಭೆಯ ಒಮ್ಮತದಿಂದ ಈ ಪ್ರಕರಣವನ್ನು ಆದ್ಯತೆಯ ಮೇರೆಗೆ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.

2) ಮುಂದುವರೆದು ಚಾಮರಾಜನಗರ ವಿಭಾಗಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ 06 ಪ್ರಕರಣಗಳ ಬಗ್ಗೆ ಸಭೆಯ ಗಮನಕ್ಕೆ ತಂದರು.

1. M/s Niligiri Plantation Limited, Honnameti Estate, Attikan (Birla Group)-184 Acres
2. Biligiri Rangana Coffee Estate, Bedaguli (Birla Group)-206 Acres
3. Emerald Valley Estate Limited, Bedaguli (TVS Group) -327.1 Acres
4. Sangameshwara Coffee Estate -433.71 Estate
5. Bellagi estate -60 Acres
6. Kadigere Estate-25 Acres

ಲಭ್ಯವಿರುವ ಮಾಹಿತಿಯಂತೆ ಎರಡು ಪ್ರಕರಣಗಳಾದ Niligiri Plantation, Honnameti Estate, Attikan ರಿಟ್ ಅರ್ಜಿ ಸಂಖ್ಯೆ:52467-71/2015 ಮತ್ತು R.S.A. Kadigere Estate 1028/2018-25 Acres. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಈ ಎರಡು ಪ್ರಕರಣಗಳನ್ನು ಆದ್ಯತೆಯ ಮೇರೆಗೆ ತೆಗೆದುಕೊಳ್ಳುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

ಉಳಿದಂತೆ Emerald Valley Estate Limited-327 Acres ಗೆ ಸಂಬಂಧಿಸಿದಂತೆ S.L.P:18889/2017 ಮತ್ತು S.L.P:21647/2018ರ ಪ್ರಕರಣಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ



Generated from eOffice by Devendra Reddy, FEE-ASST(DR)-SECTION -C, ASSISTANT, FOREST DEPARTMENT SEC on 14/11/2024 12:16 PM

Scanned with OKEN Scanner

ಇರುವುದಾಗಿ ಇದರ ಬಗ್ಗೆ ವಿವರಗಳನ್ನು ನೀಡುವಂತೆ ಸೂಚಿಸಿದರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಈ ಪ್ರಕರಣಗಳನ್ನು ಆದ್ಯತೆಯ ಮೇರೆಗೆ ಇತ್ಯರ್ಥಪಡಿಸುವ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಭೆಯಲ್ಲಿ ಎಲ್ಲರಿಗೂ ತಿಳಿಸಿದಂತೆ ಮೊದಲಿಗೆ 57467/2015 ಮತ್ತು R.S.A-1028, 25 ಎಕರೆ ಈ ಪ್ರಕರಣಗಳನ್ನು ಆದ್ಯತೆ ಮೇರೆಗೆ ಪ್ರಕರಣಗಳನ್ನು ಕೈಗೆತ್ತಿಕೊಂಡು ಸರ್ಕಾರಕ್ಕೆ ಪತ್ರವನ್ನು ಬರೆಯಲು ತೀರ್ಮಾನಿಸಲಾಯಿತು.

ಮೇಲೆ ತಿಳಿಸಿರುವ ಎಲ್ಲಾ ಪ್ರಕರಣಗಳಿಗೆ (ಮಡಿಕೇರಿ- ಚಾಮರಾಜನಗರ) ಸಂಬಂಧಪಟ್ಟ ಅಧಿಕಾರಿಗಳು ಪ್ರತಿ ಪ್ರಕರಣಗಳಿಗೆ ಮಾಹಿತಿಯನ್ನು ದಾಖಲಿಸಿ ಪ್ರಮಾಣ ಪತ್ರವನ್ನು ಮಾನ್ಯ ಉಚ್ಚ ನ್ಯಾಯಾಲಯದ ವಕೀಲರಿಗೆ ಸಲ್ಲಿಸುವಂತೆ ಹಾಗೂ ಸರ್ಕಾರಕ್ಕೆ ಪತ್ರವನ್ನು ಬರೆಯುವಂತೆ ತಿಳಿಸಲಾಯಿತು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಬಿ.ಪಿ. ರವಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಪರಿಸರ ಇಲಾಖೆ ಹಾಗೂ ಪದನಿಮಿತ್ತ
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ.



Generated from eOffice by Devendra Reddy, FEE-ASST(DR)-SECTION -C, ASSISTANT, FOREST DEPARTMENT SEC on 14/11/2024 12:16 PM
Scanned with OKEN Scanner

A

## FORM R.

[Rule, 62.]

### Form of Demise for the leasing of land for Rubber / Agave / Tea cultivation.

This indenture made the day of 19 , between the Governor General in Council * (hereinafter called the lessor, in which term are also included his successors in office and assigns unless the context shall be repugnant to such construction) of the one part and A.B. (hereinafter called the lessee in which term are also included his heirs, representatives and assigns unless the context shall be repugnant to such construction) of the other part.

Witnesseth that the lessor, in consideration of the sum of Rupees duly paid by the lessee, the receipt of which is hereby acknowledged, doth hereby demise unto the lessee, his heirs and representatives for a period of 99 years from now, the parcel of 1st class land / 2nd class land / 3rd class land as so described in Rule 62 [144] of the rules issued under the Coorg Land and Revenue Regulation, 1899, acres in extent and situated in the village of in nad of the North / South Coorg in the Province of Coorg and included within the following boundaries :—

* * * * * * *

and described on the plan annexed to this deed and thereon edged with a verge line of and marked which said parcel of land is part of the land shown on the said plan marked ; together with the right of obtaining the demise of the remainder of the said land subject to the restrictive and other stipulations set forth in the schedule hereto so far as the same respectively relate to or affect the remainder of the said land ; except and reserving unto the lessor so much of the said land as on the said plan is coloured . To hold the said land (except the land reserved as aforesaid) unto and to the use of the lessee, his heirs, representatives and assigns for the period aforesaid, subject to the restrictions and stipulations set forth in the schedule hereto so far as the same relate to or affect the said land hereinbefore demised or hereafter to be demised under the right reserved as aforesaid unto the lessee, his heirs, representatives and assigns.

And the lessee for himself, his heirs, representatives and assigns hereby covenants and agrees with the lessor that he and they shall and will have, hold and enjoy the said land or parts thereof subject to the restrictive and other stipulations set forth in the schedule hereto so far as the same relate to or affect the said land or parts thereof hereinbefore demised or hereafter to be demised under the right reserved as aforesaid unto the lessee, his heirs, representatives and assigns. And further that he and they shall and will at all times hereafter maintain and keep in good repair at his and their own cost the boundary marks of the said land or parts thereof erected by the Government Surveyor.

In witness whereof the lessor hath hereunto set his hand the day and year first above written, etc.

THE SCHEDULE ABOVE REFERRED TO.

1. The land shall be taken from Government at an upset price of

The taking of such land from Government shall not convey to the lessee any right or interest in the trees standing on such land which shall be dealt with separately in the manner hereinafter indicated.

2. The land so taken shall be free of Government rent for (a) eight years for rubber / (b) five years for agave / (c) four years for tea cultivation from the date of its assignment. There-after the rate of rent shall be Rs. 2 an acre, which shall be payable annually on or before the 15th March, provided that this rate shall be liable to revision at the end of 30 years from the date of assignment and provided also that the land shall be liable to the payment of local rates leviable under any law for the time being in force in Coorg.

* Governor General, after the inauguration of the Federation.



Generated from eOffice by Devendra Reddy, FEE-ASST(DR)-SECTION -C, ASSISTANT, FOREST DEPARTMENT SEC on 14/11/2024 12:16 PM

Scanned with OKEN Scanner

Reg. No. M—2-0.

# THE COORG GAZETTE.

PUBLISHED BY AUTHORITY.

EXTRAORDINARY.

No. 23.] BANGALORE, WEDNESDAY, JUNE 19, 1940.

☞ Separate paging is given to this part in order that it may be filed as a separate compilation.

## PART I.

### THE CHIEF COMMISSIONER OF COORG.

NOTIFICATIONS.

Bangalore, the 10th June 1940.

No. R. F. 122/65-40. In pursuance of sub-section (2) of section 1 of the Coorg (Transfer of Functions) Act, 1940 (Coorg Act VI of 1940), the Chief Commissioner is hereby pleased to appoint the 1st July 1940 as the date on which the said Act shall come into force.

---

Bangalore, the 15th June 1940.

No. R. F. 14(14)-40. The Chief Commissioner directs that the following amendments shall be made in the rules for the Text Book Committee for Coorg published in his notification R. Dis. No. 200/321-39, dated the 16th December 1939 :—

In rules 5, 8 and 10 (2) for the words "Commissioner" substitute the words "Chief Commissioner".

(The above amendments will take affect from the 1st July 1940.)

---



Generated from eOffice by Devendra Reddy, FEE-ASST(DR)-SECTION -C, ASSISTANT, FOREST DEPARTMENT SEC on 14/11/2024 12:16 PM

Scanned with OKEN Scan

3. The lessee has the option of acquiring the remainder on the land adjoining the portion marked . . . . . . , which said remainder is delineated on the plan annexed to this demise. This option can be exercised by the lessee on payment of the price as paid for the original block and the stamp duty payable on leases under the law for the time being in force in respect of the land to be taken up, provided that adequate arrangements are made by him, for the extinction of private rights if any, subsisting in the said land and that he undertakes to make good to Government any loss of revenue resulting from such extinction: Provided also that the total area held under this demise is in a compact block and does not exceed 1,000 acres.

Nothing hereinbefore contained shall oblige the lessee to exercise the option aforesaid in respect of the whole block at any one time, provided that should he choose to exercise it, he shall acquire not less than 100 acres at a time; and the right of taking up land reserved for him shall lapse in respect of such portions of the block as have not been taken up by him within the number of years (commencing from the date of the demise) represented by the number of 100 acres comprised in the block.

The taking up of land in exercise of the option referred to in this clause shall, as occasion may require, be endorsed on this deed by the Assistant Commissioner of Coorg under his hand and seal.

4. The lessee shall notify to the Forest Department in Coorg not later than the 31st October of the year concerned the extent and situation of the land which he may wish to clear for purposes of cultivation or otherwise, during the dry season next following and shall, before such clearance is commenced pay to Government the value of timber on that land, which said value shall be assessed by the Forest Department in accordance with the rules for the time being in force issued under the Coorg Land and Revenue Regulation.

5. (i) The sandal trees growing at any time upon the leased land shall remain the property of Government. The lessee shall take all reasonable precautions to preserve all such trees and to protect the host plants marked by the Forest Department. He shall be required to enter into an agreement to this effect before taking possession of the land.

(ii) A Forest Officer authorised in this behalf may enter on any land and may tend, uproot and remove any sandal trees growing on the land leased. The lessee shall be given a fortnight's notice in writing before a Forest Officer enters his lands in order to remove sandal trees growing on them.

(iii) In exceptional circumstances on receipt of a representation from the lessee that the preservation of sandal trees or their host plants interferes with this cultivation, the Chief Forest Officer may order the removal of sandal trees or their host plants growing on the land.

(iv) A bonus shall be paid to the lessee for the sandal trees removed from his land at the rates and under the conditions prescribed by Government for the grant of such bonus.

6. The lessee, in order to prevent the denudation of soil, shall be bound to construct contour drains on all slopes and, where the land is very steep, also to raise cover crops of leguminous plants for at least the first five years after clearance.

7. The land shall primarily be used for purposes of ~~agave~~ rubber tea cultivation. Although the lessee is not precluded from cultivating other trees or crops on the land, such cultivation shall be strictly subordinated to the cultivation of the main crop. For any breach of this stipulation the Assistant Commissioner or officer specially authorised in his behalf may at his option and unfettered discretion either terminate the lease after giving 6 months' notice or impose and levy a rent up to Rs. 20 per acre per annum on the whole area or such portion thereof as may be determined by the officer aforesaid and the lessee shall be liable to pay the same as long as the breach continues.

8. All rents, local rates, value of timber and other sums payable by the lessee if not paid when due shall be recoverable under the law for the time being in force as if they were an arrear of land-revenue.

9. After the period of 99 years aforesaid the lands hereby leased shall with all improvements thereon revert to the lessor.

10. In these stipulations the expression "Lessee" includes his heirs, representatives and assigns and the expression "Lessor" includes his successors in office and assigns.


Generated from eOffice by Devendra Reddy, FEE-ASST(DR)-SECTION -C, ASSISTANT, FOREST DEPARTMENT SEC on 14/11/2024 12:16 PM
Scanned with OKEN Scanner

**ಅರಣ್ಯ ಜಮೀನು ಗುತ್ತಿಗೆ ನೀಡಿರುವ ಪ್ರಕರಣಗಳ ಪರಿಶೀಲನೆ, ಗೇಣಿ ವಸೂಲಾತಿ ಹಾಗೂ ಇತರೆ ವಿಷಯಗಳ ಪರಿಶೀಲನೆಯ ಕುರಿತು ದಿನಾಂಕ: 13-02-2024 ರಂದು ಮಧ್ಯಾಹ್ನ 03:00 ಗಂಟೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪರಿಸರ ಇಲಾಖೆ ಹಾಗೂ ಪದನಿಮಿತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.**

ಸಭೆಯಲ್ಲಿ ಹಾಜರಿದ್ದ ಸದಸ್ಯರು.

1. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಭೂ ದಾಖಲೆ, ಬೆಂಗಳೂರು.
2. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಾನೂನು ಕೋಶ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗುವೃತ್ತ,
4. ಅರಣ್ಯ ಸಂರಕ್ಷಣಾಧಿಕಾರಿ, ಚಾಮರಾಜನಗರ ವೃತ್ತ
5. ಅರಣ್ಯ ಸಂರಕ್ಷಣಾಧಿಕಾರಿ, ಹುಲಿಸಂರಕ್ಷಿತ ಅರಣ್ಯ ಪ್ರದೇಶ, ಚಾಮರಾಜನಗರ.
6. ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿ.
7. ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿರಾಜಪೇಟೆ.
8. ಎಂ.ಎಂ.ಹಿಲ್ಸ್ (ವನ್ಯಜೀವಿ), ಕೊಳ್ಳೆಗಾಲ.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪರಿಸರ ಇಲಾಖೆ ಹಾಗೂ ಪದನಿಮಿತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಇವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು.

ಮುಂದುವರೆದು, ಸರ್ಕಾರಿ ಆದೇಶ ಸಂಖ್ಯೆ:ಎಫ್‌ಇಇ 47 ಎಫ್‌ಎಲ್‌ಎಲ್ 2024 ದಿನಾಂಕ:23-01-2024ರ ಆದೇಶದ ಹಿನ್ನೆಲೆಯಲ್ಲಿ ಕೊಡಗು ಮತ್ತು ಚಾಮರಾಜನಗರ ಅರಣ್ಯ ವೃತ್ತಗಳಲ್ಲಿ ವಿವಿಧ ಉದ್ದೇಶಗಳಿಗೆ ಅರಣ್ಯ ಜಮೀನುಗಳನ್ನು ಗುತ್ತಿಗೆ ನೀಡಿರುವ ಪ್ರಕರಣಗಳ ಪರಿಶೀಲನೆ ನಡೆಸಿ ಗುತ್ತಿಗೆ ಅವಧಿ ಮುಗಿದಿದ್ದಲ್ಲಿ ಸದರಿ ಅರಣ್ಯ ಪ್ರದೇಶಗಳನ್ನ ಇಲಾಖೆ ವಾಪಸ್ ಪಡೆಯುವ ಬಗ್ಗೆ ಹಾಗೂ ಸರ್ಕಾರಕ್ಕೆ ಪಾವತಿಸಬೇಕಿರುವ ಹಣ ವಸೂಲಾತಿ ಬಗ್ಗೆ, ಹಲವಾರು ವರ್ಷಗಳಿಂದ ಪ್ರಕರಣಗಳು ನ್ಯಾಯಾಲಯಗಳಲ್ಲಿ ದಾಖಲಾಗಿದ್ದು ಅವುಗಳನ್ನು ಪರಿಶೀಲಿಸಿ ತುರ್ತಾಗಿ ಗುತ್ತಿಗೆ ಕೊಟ್ಟಿರುವ ಅರಣ್ಯ ಪ್ರದೇಶ ಮತ್ತು ಗುತ್ತಿಗೆ ಹಣ ವಸೂಲಾತಿಗೆ ಜರೂರಾಗಿ ಕ್ರಮ ಜರುಗಿಸುವ ಬಗ್ಗೆ ವಿವರವಾಗಿ ಸಭೆಯ ಗಮನಕ್ಕೆ ತಂದರು.

ತದನಂತರ ವಿಭಾಗಾವಾರು ಪ್ರಕರಣಗಳನ್ನು ಪರಿಶೀಲಿಸಿದರು. ಲಭ್ಯವಿರುವ ಮಾಹಿತಿಯಂತೆ ಕೊಡಗು ವೃತ್ತದಲ್ಲಿ ಒಟ್ಟು 06 ಕಂಪನಿಗಳಿಗೆ ಒಟ್ಟಾರೆ 6146.37 ಎಕರೆಯಷ್ಟು ಅರಣ್ಯ ಪ್ರದೇಶವಿದ್ದು 06 ಕಂಪನಿಗಳಿಂದ 1466 ಕೋಟಿಗಳಷ್ಟು ಲೀಸ್ ರೆಂಟ್ ಬಾಕಿ ಇರುವುದರ ಬಗ್ಗೆ ಖಚಿತ ಮಾಹಿತಿ ಕೊಡಲು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ಇವರಿಗೆ ಸೂಚಿಸಿದರು. **(ಅನುಬಂಧ-1)**

ಮುಂದುವರೆದು ಪ್ರತಿ ಪ್ರಕರಣದ ಬಗ್ಗೆ ಸಂಕ್ಷಿಪ್ತ ಟಿಪ್ಪಣಿಯ ಜೊತೆಗೆ ನ್ಯಾಯಾಲಯದಲ್ಲಿರುವ ಪ್ರಕರಣಗಳ ಬಗ್ಗೆ ವಿವರಗಳನ್ನು [illegible] ಮೀಸಲು ಅರಣ್ಯ ವ್ಯಾಖ್ಯಾನದ ಬಗ್ಗೆ ನ್ಯಾಯಾಲಯದ ಆದೇಶವೇನು? ಗುತ್ತಿಗೆ ಭೂಮಿ ಮರು ವಶ ಪಡೆಯಲು ಮಧ್ಯಂತರ ತಡೆಯಾಜ್ಞೆಯಿದೆಯೇ ಅಥವಾ ಗುತ್ತಿಗೆ ಹಣದ ವಸೂಲಾತಿಯ ಬಗ್ಗೆ ನ್ಯಾಯಾಲಯದ ಆದೇಶವೇನು? ಎಂಬುದರ ವಿವರಗಳನ್ನು ಪ್ರಕರಣವಾರು ಇತ್ತೀಚಿನ

ನ್ಯಾಯಾಲಯದ ಆದೇಶ ಕುರಿತಂತೆ ಪ್ರತಿಗಳೊಂದಿಗೆ ಹಾಗೂ ಇಲಾಖಾ ವತಿಯಿಂದ ಇದುವರೆವಿಗೂ ಮಧ್ಯಂತರ ತಡೆಯಾಜ್ಞೆ ತೆರವುಗೊಳಿಸಲು ಕೈಗೊಂಡ ಕ್ರಮಗಳೇನು? ಕಂದಾಯ ದಾಖಲಾತಿಯಲ್ಲಿ ಈ ಪ್ರದೇಶಗಳ ಬಗ್ಗೆ ಏನೆಂದು ನಮೂದಿಸಲಾಗಿದೆ? ಇದುವರೆವಿಗೂ ಪ್ರಕರಣವಾರು ಪಡೆದ ಗುತ್ತಿಗೆ ಹಣವೆಷ್ಟು ಎಂಬುದರ ಬಗ್ಗೆ ಸವಿವರವಾದ ವಿವರಗಳನ್ನು ಆದ್ಯತೆಯ ಮೇರೆಗೆ ತುರ್ತಾಗಿ ವರದಿ ಮಾಡಲು ಸೂಚಿಸಿದರು.

ಮುಂದುವರೆದು ಇಲಾಖೆ ಇದುವರೆವಿಗೂ ಸಲ್ಲಿಸಿರುವ ಪ್ರಕರಣವಾರು Statement of objection, ಮತ್ತು Affidavit ಸಲ್ಲಿಸಿದ್ದಲ್ಲಿ ಅದರ ಮಾಹಿತಿಯನ್ನು ಹಾಗೂ ಪ್ರಕರಣದ ಸಂಬಂಧಪಟ್ಟ ಎಲ್ಲಾ ಸರ್ಕಾರಿ ದಾಖಲಾತಿಗಳನ್ನು ಸಲ್ಲಿಸಲು ಸೂಚಿಸಿದರು. ಅಲ್ಲದೇ ಈ ನ್ಯಾಯಾಲಯದಲ್ಲಿರುವ ತಡೆಯಾಜ್ಞೆಯನ್ನು ತೆರವುಗೊಳಿಸುವ ಬಗ್ಗೆ Advocate General ರವರ ಕಛೇರಿಯೊಂದಿಗೆ ಪತ್ರವ್ಯವಹಾರ ಮಾಡಿದ್ದಲ್ಲಿ ಅವುಗಳ ಮಾಹಿತಿಯನ್ನು ಸಲ್ಲಿಸಲು ಸಹ ಸೂಚಿಸಿದರು.

**(ಕ್ರಮ:ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ)**

ಚಾಮರಾಜನಗರ ವೃತ್ತದಲ್ಲಿ ಬರುವ 03 ಕಂಪನಿಗಳು ಒಟ್ಟು 1200 ಎಕರೆಯಷ್ಟು ಅರಣ್ಯ ಪ್ರದೇಶದಲ್ಲಿ ಗುತ್ತಿಗೆ ಆಧಾರದ ಮೇಲೆ ಜಮೀನು ಪಡೆದಿದ್ದು ಸದರಿ ಪ್ರಕರಣಗಳ ಬಗ್ಗೆ ಎಸ್ಟೇಟ್ ವಾರು, ಸರ್ವೆನಂಬರ್ ವಾರು , ಮಾಹಿತಿಗಳನ್ನು ಹಾಗೂ ವಿವಿಧ ಕೋರ್ಟ್ ಗಳಲ್ಲಿರುವ ಪ್ರಕರಣ ಬಗ್ಗೆ ಕೊಡಗು ವೃತ್ತದವರು ಕೊಟ್ಟಿರುವ ಅನುಬಂಧ-1ರ ಮಾದರಿಯಲ್ಲಿ ವಿವರಗಳನ್ನು ಕೊಡಲು ಹಾಗೂ ವಿವಿಧ ನ್ಯಾಯಾಲಯಗಳಲ್ಲಿರುವ ರಿಟ್ ಅರ್ಜಿವಾರು ಸಂಬಂಧಿಸಿದ ಅರಣ್ಯ ಪ್ರದೇಶದ ವಿವರ ಸರ್ವೆ ನಂಬರ್ ವಾರು ಗುತ್ತಿಗೆ ಹಣದ ವಿವರ ಹಾಗೂ ಇತ್ತೀಚಿನ ನ್ಯಾಯಾಲಯದ ಆದೇಶಗಳು, ಇಲಾಖೆ ತೆಗೆದುಕೊಂಡಿರುವ ಕ್ರಮಗಳು ಪ್ರಕರಣವಾರು Statement of objection, ಮತ್ತು Affidavit ಸಲ್ಲಿಸಿದ್ದಲ್ಲಿ ಅದರ ಮಾಹಿತಿಯನ್ನು ಹಾಗೂ ಪ್ರಕರಣದ ಸಂಬಂಧಪಟ್ಟ ಎಲ್ಲಾ ಸರ್ಕಾರಿ ದಾಖಲಾತಿಗಳನ್ನು ಸಲ್ಲಿಸಲು ಸೂಚಿಸಿದರು.

**(ಕ್ರಮ: ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಚಾಮರಾಜನಗರ ವೃತ್ತ)**

ಮೇಲೆ ಹೇಳಿರುವ ಮಾಹಿತಿಯನ್ನು 10 ದಿನಗಳ ಒಳಗಾಗಿ ಸಲ್ಲಿಸಲು ಸೂಚಿಸಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ ಇವರುಗಳು ಒಮ್ಮತ್ತದಿಂದ ಪ್ರಕರಣಗಳ ಕುರಿತು ಕಾನೂನು ಸಲಹೆಗಾರರಾಗಿ **Special Senior council ಆಗಿ M.B. Prabhakar, advocate** ಇವರನ್ನು ನೇಮಕ ಮಾಡುವಂತೆ ಕೋರಿದರು.

ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

**(ಬಿ.ಪಿ. ರವಿ)**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪರಿಸರ ಇಲಾಖೆ ಹಾಗೂ ಪದನಿಮಿತ್ತ
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ.

ಅನುಬಂಧ-4

ಸಂಖ್ಯೆ:KFD/HOFF/A5a(WPA)(2)/2024-

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿ
ಬೆಂಗಳೂರು, ದಿನಾಂಕ: 15.06.2024

ಇವರಿಗೆ,

ಅಡ್ವೋಕೇಟ್ ಜನರಲ್,
ಕರ್ನಾಟಕ ಉಚ್ಚ ನ್ಯಾಯಾಲಯ,
ಅಂಬೇಡ್ಕರ್ ವೀದಿ,
ಬೆಂಗಳೂರು-560001.

ಮಾನ್ಯರೇ,

ವಿಷಯ: ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಉಳಿದಿದ್ದು ಸದರಿ ಪ್ರಕರಣದ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಕೋರಿ.

ಉಲ್ಲೇಖ: ಉಪ ಅರಣ್ಯ ಸಂರಕ್ಷಣಾಧಿಕಾರಿ ಮಡಿಕೇರಿ ವಿಭಾಗ, ಮಡಿಕೇರಿ ರವರ ಪತ್ರ ಸಂಖ್ಯೆ:ಎ3/ಭೂಮಿ/ರಬ್ಬರ್/ಸಿಆರ್-1 (2023-24)/99 ದಿನಾಂಕ: 04.06.2024

*******

ಮೇಲಿನ ವಿಷಯ ಹಾಗೂ ಉಲ್ಲೇಖಿತ ಪತ್ರಕ್ಕೆ ಸಂಬಂಧಿಸಿದಂತೆ, ಸರ್ಕಾರದಿಂದ ಗೇಣಿಗೆ ನೀಡಲಾಗಿರುವ ಅರಣ್ಯ ಜಾಗಗಳನ್ನು ಗೇಣಿ ಅವಧಿ ಮುಗಿದ ನಂತರ ಇಲಾಖಾ ವಶಕ್ಕೆ ಹಿಂಪಡೆಯುವ ಬಗ್ಗೆ ಮಡಿಕೇರಿ ವಿಭಾಗ ವ್ಯಾಪ್ತಿಯಲ್ಲಿ The Mercara Rubbers Ltd, Thomsan Plantation (India) Pvt Ltd. The Nilambur Rubber Co.Ltd ಕಂಪನಿಯ ಲೀಸ್ ಅವಧಿ ಈಗಾಗಲೇ ಮುಗಿದಿದ್ದು ಸರ್ಕಾರಕ್ಕೆ ಲೀಸ್ ಮೊತ್ತ ಬಾಕಿ ಉಳಿಸಿಕೊಂಡಿರುತ್ತದೆ ಹಾಗೂ ಸದರಿ ಲೀಸ್ ಭೂಮಿಯನ್ನು ಅರಣ್ಯ ಇಲಾಖಾ ಪರ ವಶಕ್ಕೆ ಪಡೆಯಬೇಕಾಗಿದ್ದು, ಈ ಕುರಿತಂತೆ ರಬ್ಬರ್ ಕಂಪನಿಯವರು ಲೀಸ್ ಭೂಮಿಯನ್ನು ಅರಣ್ಯ ಇಲಾಖಾ ವಶಕ್ಕೆ ಪಡೆದುಕೊಳ್ಳುವ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಧಾವೆಯನ್ನು ಹೂಡಿದ್ದು, ಸದರಿ ಪ್ರಕರಣಗಳ ವಿವರ ಈ ಕೆಳಗಿನಂತಿದೆ.

| SL NO | Rubber company Name | Case Number | Last Date of action | Remarks |
|---|---|---|---|---|
| 1 | The Mercara Rubbers Ltd | WP No 44445 of 2013 | 23.03.2023 | – |
| 2 | The Mercara Rubbers Ltd | WP No 30151-53 of 2015 | 23.08.2023 | – |
| 3 | The Mercara Rubbers Ltd | RFA 701 of 2015 | 03.09.2022 | – |
| 4 | Thomsan Plantation (India) Pvt ltd. | WP No 40364 of 2013 | 23.03.2023 | – |
| 5 | Thomsan Plantation (India) Pvt.ltd | WP No 55866 of 2015 | 23.03.2023 | – |
| 6 | The Nilambur Rubber Co.ltd | WP No 41511-12 of 2015 | 23.03.2023 | – |
| 7 | The Nilambur Rubber Co.ltd | WP No 55037-38/2015 | 10.01.2023 | – |

ಈ ಮೇಲಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ " Advancement Memo" ಹಾಕುವುದರ ಮೂಲಕ ಪ್ರಕರಣಗಳು ವಿಚಾರಣೆಗೆ ಬರುವಂತೆ ಕ್ರಮ ಕೈಗೊಂಡು ಸದರಿ ಪ್ರಕರಣವನ್ನು ತ್ವರಿತವಾಗಿ ವಿಲೇ ಮಾಡಿ ಮುಕ್ತಾಯ ಗೊಳಿಸಬೇಕಾಗಿ ಈ ಮೂಲಕ ಕೋರಿದೆ.

ತಮ್ಮ ವಿಶ್ವಾಸಿ,

25/06/24

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,

(ಅರಣ್ಯ ಪಡೆ ಮುಖ್ಯಸ್ಥರು),

ಬೆಂಗಳೂರು.